**ಸಾಕ್ಷಿಯನ್ನು ದಿಃ 30.08.2024 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಃ ಆರೋಪಿ ಪರ ಶ್ರೀ ಎಂ ಇ ಪಿ ವಕೀಲರಿಂದಃ-**

ನನ್ನ ಕುಟುಂಬಕ್ಕೆ ಬಿ ಪಿ ಎಲ್ ಕಾರ್ಡ್ ಇದೆ. ಕಡುಬಡವರಿಗೆ ಮಾತ್ರ ಬಿ ಪಿ ಎಲ್ ಕಾರ್ಡ್ ಕೊಡುತ್ತಾರೆ ಎಂದರೆ ಸರಿ. ರೂ 1,20,000/- ಕ್ಕಿಂತ ಹೆಚ್ಚು ವಾರ್ಷಿಕ ಆದಾಯ ಇದ್ದರೆ ಬಿ ಪಿ ಎಲ್ ಕಾರ್ಡ್ ನೀಡುವುದಿಲ್ಲ ಎಂದರೆ ಗೊತ್ತಿಲ್ಲ. ನಾನು ಜುಲೈ 2019 ರಲ್ಲಿ ಹಣ ಕೊಟ್ಟಿದ್ದೇನೆ ತಾರೀಖು ಮರೆತು ಹೋಗಿದೆ. ಸಾಮಾನ್ಯವಾಗಿ ದೊಡ್ಡ ಮೊತ್ತದ ವ್ಯವಹಾರವನ್ನು ಬರವಣಿಗೆಯಲ್ಲಿ ಮಾಡಲಾಗುತ್ತದೆ ಎಂದರೆ ಸರಿ. ನನ್ನ ಮತ್ತು ಆರೋಪಿಯ ಮಧ್ಯದ ವ್ಯವಹಾರ ನಡೆದಿರುವ ಬಗ್ಗೆ ಬರವಣಿಗೆ ಆಗಿಲ್ಲ. ಆರೋಪಿಗೆ ನಾನು ಹುಣಸೂರಿನಲ್ಲಿ ಹಣ ಕೊಟ್ಟಿದ್ದೇನೆ. ಮನೆಯಲ್ಲಿ ಇದ್ದ ಹಣವನ್ನು ಕೊಟ್ಟಿದ್ದೇನೆ. ಬಾಳೆ ವ್ಯಾಪಾರದಿಂದ ಬಂದ ಹಣ ನನ್ನ ಬಳಿ ಇತ್ತು. 2018 ರಲ್ಲಿ ಬೆಳೆಸಿದ್ದ ಬಾಳೆ 2019 ರಲ್ಲಿ ಕಟಾವು ಮಾಡಿದ್ದೆ. ಏಲಕ್ಕಿ ಬಾಳೆ ಹಾಕಿದ್ದೆ. ನಾನು ಬೇರೆ ಬೇರೆಯವರಿಗೆ ಬಾಳೆ ಮಾರಾಟ ಮಾಡಿದ್ದೇನೆ. ಅವರ ಹೆಸರು ಈಗ ಹೇಳಲಾಗುವುದಿಲ್ಲ. ಆ ಸಮಯದಲ್ಲಿ ಬಾಳೆಗೆ ರೂ 60-70 ಬೆಲೆ ಇತ್ತು. ಆ ವರ್ಷ ಎಷ್ಟು ಕೆಜಿ ಬಾಳೆ ಮಾರಾಟ ಮಾಡಿದ್ದೆ ಎಂದು ನೆನಪಿಲ್ಲ. ನನಗೆ ರೂ 3,25,000/- ಬಾಳೆ ಬೆಳೆ ಇಂದ ಬಂದಿತ್ತು. ಬಾಳೆ ಬೆಳೆಯಿಂದ ನನಗೆ ಹಣ ಬಂದಿತ್ತು ಎಂದು ದೂರಿನಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ಬರೆಸಿಲ್ಲ.

ನಾನು ಬಾಳೆ ವ್ಯವಸಾಯ ಮಾಡಿದ್ದನ್ನು ಮತ್ತು ಮಾರಾಟ ಮಾಡಿದ್ದನ್ನು ನೋಡಿದವರು ಇದ್ದಾರೆ. ಬಾಳೆ ಕೃಷಿಗೆ ಸಹಾಯಧನ ಕೊಡುತ್ತಾರೆ ಎಂದರೆ ಸರಿ. ನಾನು ಅಂತಹ ಸಹಾಯಧನ ಪಡೆದಿಲ್ಲ. ಈ ಬಾರಿ ಬಾಳೆ ಕೃಷಿಗೆ ಸಹಾಯಧನ ಪಡೆದಿದ್ದೇನೆ. ನಾನು ಬಾಳೆ ಬೆಳೆದಿದ್ದಲ್ಲಿ ಸಹಾಯಧನ ಪಡೆಯುತ್ತಿದ್ದೆ ಎಂದರೆ ಸರಿಯಲ್ಲ. ನಾನು ಬಾಳೆ ಕೃಷಿ ಮಾಡಿದ್ದನ್ನು ನೋಡಿದವರನ್ನು ಸಾಕ್ಷಿ ಮಾಡಿಸಬಹುದು. ನನ್ನಿಂದ ಬಾಳೆ ಖರೀದಿಸಿದವರನ್ನು ಸಾಕ್ಷಿ ಮಾಡಿಸಲಾಗುವುದಿಲ್ಲ. ಸಾಮಾನ್ಯವಾಗಿ ಬಾಳೆ ಬೆಳೆಯನ್ನು ಮಂಡಿಗೆ ಮಾರಾಟ ಮಾಡಲಾಗುತ್ತದೆ ಎಂದರೆ ನಾನು ಮಂಡಿಗೆ ಕೊಟ್ಟಿಲ್ಲ. ನಾನು ಬಾಳೆ ಕೃಷಿ ಮಾಡಿದ್ದಲ್ಲಿ ಅದನ್ನು ಯಾರಿಗೆ

ಮಾರಾಟ ಮಾಡಿದ್ದೆ ಎಂದು ಹೆಸರು ಹೇಳುತ್ತಿದ್ದೆ, ಅದನ್ನು ಬೆಳೆಯದೇ ಇದ್ದ ಕಾರಣ ಹೆಸರು ಹೇಳಲಾಗುತ್ತಿಲ್ಲ ಎಂದರೆ ಸರಿಯಲ್ಲ. ನನ್ನ ಜಮೀನಿನಲ್ಲಿ ಬಾಳೆ ಬೆಳೆದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. 2019 ಜುಲೈ ತಿಂಗಳಿನ ಕೊನೆಯಲ್ಲಿ ನನ್ನ ಬಳಿ ರೂ 4 ಲಕ್ಷ ಇತ್ತು ಎಂದು ತೋರಿಸಲು ದಾಖಲೆ ಇಲ್ಲ. ರೂ 4 ಲಕ್ಷ ಸಾಲ ಕೊಡಲು ನನಗೆ ಆರ್ಥಿಕ ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ.

ನಾನು ಆರೋಪಿಗೆ ಹಣ ಕೊಟ್ಟಾಗ ಮತ್ತು ಆರೋಪಿ ನನಗೆ ಚೆಕ್ ಕೊಟ್ಟಾಗ ನನ್ನ ಸ್ನೇಹಿತನಾದ ರವಿ ಇದ್ದರು. ಅವರ ತಂದೆಯ ಹೆಸರು ಗೊತ್ತಿಲ್ಲ. ಅವರು ಹುಣಸೂರಿನಲ್ಲಿ ಹಂಚಿನ ವ್ಯಾಪಾರ ಮಾಡುತ್ತಾರೆ. ನನಗೂ ಅವರಿಗೂ 15 ವರ್ಷದಿಂದ ಪರಿಚಯ. ಅವರು ನನಗೆ ರಾಜಕೀಯವಾಗಿ ಪರಿಚಯವಾದರು. ಅವರು ಕಾಂಗ್ರೆಸ್ ಪಕ್ಷದಲ್ಲಿದ್ದಾರೆ. ನನ್ನ ಸ್ನೇಹಿತನಾದ ರವಿಯ ಮೇಲೆ ಮೀಟರ್ ಬಡ್ಡಿಯ ಪ್ರಕರಣ ದಾಖಲಾಗಿತ್ತು ಎಂದರೆ ಗೊತ್ತಿಲ್ಲ. ಅವರ ವಿರುದ್ಧ ಆತ್ಮಹತ್ಯೆಗೆ ಪ್ರೇರಣೆ ನೀಡಿದ ಬಗ್ಗೆ ಪ್ರಕರಣ ದಾಖಲಾಗಿತ್ತು ಎಂದರೆ ಗೊತ್ತಿಲ್ಲ. ನಾನು ಮತ್ತು ರವಿ ರವರು ಖುದ್ದಾಗಿ ಭೇಟಿ ಮಾಡಿ ಫೋನ್ ನಲ್ಲಿಯೂ ಮಾತನಾಡುತ್ತಿರುತ್ತೇವೆ ಎಂದರೆ ಸರಿ. ನಾವು ಆತ್ಮೀಯ ಸ್ನೇಹಿತರಾಗಿರುವ ಕಾರಣ ಇಬ್ಬರು ನಮ್ಮ ವಿಷಯಗಳನ್ನು ಹಂಚಿಕೊಳ್ಳುತ್ತೇವೆ ಎಂದರೆ ಸರಿಯಲ್ಲ. ನನಗೆ ಹೆಗ್ಗಂದೂರು ಶಿವಕುಮಾರ್ ಗೊತ್ತಿಲ್ಲ. ಗವಿಮಾದು ಗೊತ್ತಿಲ್ಲ. ನಾಗರಾಜೇಗೌಡ ಗೊತ್ತು ಅವರಿಗೂ ನನಗೂ ವ್ಯವಹಾರ ಇತ್ತು. ನನಗೂ ಅವರಿಗೂ ವ್ಯವಹಾರ ಆಗದೇ ಇದ್ದ ಕಾರಣ ನಾನು ಕೇಸನ್ನು ವಾಪಸ್ಸು ತೆಗೆದುಕೊಂಡೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲು ಮುಂದೂಡಲಾಗಿದೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ. ಹುಣಸೂರು.